# ಲಯದ ನಂತರದ ಪಯಣ

## ಜಲವು ತಾನು ಜಲಜನಕವಾಗಿದ್ದೆನೆಂದು ಮರೆತಾಗ



**ಪೂಜ್ಯ ದಾಜಿ** ಯವರ

70ನೆಯ ಜನ್ಮದಿನದ ಸಂದರ್ಭದಲ್ಲಿ

ಸೆಪ್ಟೆಂಬರ್ 28, 2025 ರಂದು ಕಾನ್ಹಾ ಶಾಂತಿವನಂನಲ್ಲಿ ನೀಡಿದ ಸಂದೇಶ

# ಲಯದ ನಂತರದ ಪಯಣ:

## ಜಲವು ತಾನು ಜಲಜನಕವಾಗಿದ್ದೆನೆಂದು ಮರೆತಾಗ

ಪ್ರಿಯರೆ,

ಮುಕ್ತಿ ಅಥವಾ ನಿರ್ವಾಣವು ಆಧ್ಯಾತ್ಮಿಕ ಪ್ರಗತಿಯ ಪರಾಕಾಷ್ಠೆಯೆಂದು ಬಹಳಷ್ಟು ಜನರು ನಂಬುತ್ತಾರೆ. ಮುಕ್ತಿಯೆಂದರೆ ಲೋಭ, ದ್ವೇಷ, ದುರಹಂಕಾರ ಮತ್ತು ಅಜ್ಞಾನದ ಬೆಂಕಿಯನ್ನು ನಂದಿಸುವುದು. ಅದು ಸಾವು–ನೋವುಗಳ ಅಂತ್ಯ. ಅದು ಮುಕ್ತಿಯ ಅತ್ಯುನ್ನತ ಸ್ಥಿತಿ.

ಮುಂದೆ, ಕಬೀರ್ ಸಾಹೇಬರು ಹೇಳಿದಂತೆ, ನಮ್ಮ ಅಹಂಕಾರ ಹಿಮ್ಮೆಟ್ಟುತ್ತಿದ್ದಂತೆ ನಾವು ವಿಲಯನದ ಸಾಧ್ಯತೆಯ ಬಗ್ಗೆ ಕೊಂಚ ಅರ್ಥೈಸಿಕೊಳ್ಳತೊಡಗುತ್ತೇವೆ. ಕಬೀರ್ ಸಾಹೇಬರು ಅದು ಅತಿ ಸುಲಭವೆನ್ನುವಂತೆ ಹೇಳುತ್ತಾರೆ. ಲಯಾವಸ್ಥೆಯೆಂದರೆ, ಮಳೆಹನಿಗಳು ಸಾಗರದೊಳಕ್ಕೆ ಬೀಳುವಂತೆ ಎಂದು ಅವರು ಹೇಳುತ್ತಾರೆ. ಹೇಗೆ ಸಾಗರವೇ ತಾನಾಯಿತೆಂದು ಹೇಳಲು ಯಾವ ಹನಿಯೂ ಉಳಿಯಲಾರದು.

"ನೀವು ಲಯಾವಸ್ಥೆಯನ್ನು ಸಾಧಿಸಿದಾಗ ನಿಮ್ಮನ್ನು ಆರಂಭಿಗನೆಂದು ಹೇಳಬಹುದು" ಎಂಬ ಬಾಬೂಜಿಯವರ ಆಘಾತಕಾರಿ ಉಕ್ತಿಯು, ನಮಗೆ ತಿಳಿದಿದೆಯೆಂದು ಅಂದುಕೊಂಡಿದ್ದೆಲ್ಲವನ್ನೂ ತಲೆಕೆಳಗಾಗಿಸುತ್ತದೆ! ಹಾದಿಯ ಅಂತ್ಯವೆಂದು ನಾವು ತಿಳಿದ ಘಟ್ಟವು, ನಿಜವಾಗಲೂ ನಮ್ಮನ್ನು ನಿಜವಾದ ಪಯಣದ ಆರಂಭಕ್ಕೆ ಸಿದ್ಧಗೊಳಿಸುತ್ತಿದೆ.

ಮತ್ತೊಂದು ರೀತಿಯಲ್ಲಿ ಹೇಳಬೇಕೆಂದರೆ, ಸಂಗೀತಕಾರನೊಬ್ಬನು ತನ್ನ ವಾದ್ಯವನ್ನು ನುಡಿಸುವುದನ್ನು ಕಲಿಯಲು ವರ್ಷಗಳನ್ನೇ ಕಳೆಯುತ್ತಾನೆ. ಅದರಲ್ಲಿ ಸಂಪೂರ್ಣ ಪ್ರಾವೀಣ್ಯವನ್ನು

ಪಡೆದಾಗ ಮಾತ್ರವೆ ಆತ ಹೊಸತನ್ನು ಸೃಷ್ಟಿಸಲು ಆರಂಭಿಸುತ್ತಾನೆ; ಅವನ ಮತ್ತು ಅವನ ಸಂಗೀತದ ನಡುವೆ ಯಾವ ವ್ಯತ್ಯಾಸವೂ ಉಳಿದಿರುವುದಿಲ್ಲ. ತಂತ್ರಗಳಿಂದ ಅಪ್ಪಟ ಅಭಿವ್ಯಕ್ತಿ ಹೊಮ್ಮುತ್ತದೆ.

ಈಗ ಪ್ರಶ್ನೆಯೆಂದರೆ: ಸಂಗೀತಕಾರ ಮತ್ತು ಸಂಗೀತದ ಐಕ್ಯದ ನಂತರ ಆಗುವುದೇನು? ಎಲ್ಲ ಸಂಗೀತವೂ, ಹೊಮ್ಮುವ ಮತ್ತು ಮರೆಯಾಗುವ ಮೌನ. ಅದು ಶುಷ್ಕ ಮೌನವಲ್ಲ; ಮಧುರ ಸಂಗೀತವೆಲ್ಲದರ ಸಾಧ್ಯತೆಯಿಂದ ತುಂಬಿರುವಂಥದ್ದು. ಅತಿ ಪ್ರಭಾವಶಾಲಿ ಸಂಗೀತವು ಸ್ವರಗಳ ನಡುವಿನ ಅವಕಾಶದಲ್ಲಿ ಇರುವುದೆಂದು ಸ್ವರಪಾಂಡಿತ್ಯ ಪಡೆದವನಿಗೆ ತಿಳಿದಿರುತ್ತದೆ.

> ‘‘ನೀವು ಲಯಾವಸ್ಥೆಯನ್ನು ಸಾಧಿಸಿದಾಗ ನಿಮ್ಮನ್ನು ಆರಂಭಿಗನೆಂದು ಹೇಳಬಹುದು.’’
> – ಬಾಬೂಜಿ

ಲಯ ಮತ್ತು ಅದರ ನಂತರ ಏನಾಗುತ್ತದೆಂದು ನೋಡೋಣ.

ಮೊದಲಿಗೆ, ಅದು ಯಾರಿಗೆ ಬೇಕಾಗಿದೆಯೆಂದು ನಮಗೆ ತಿಳಿದಿರಬೇಕು. ಅನ್ವೇಷಣೆ ಮುಗಿಯಿತೆಂದು ಹೇಳಲು ಯಾರು ಉಳಿದಿರುತ್ತಾರೆ? ಬಿಂದುವು, "ನಾನು ಸಿಂಧುವಾದೆ!" ಎಂದು ಹೇಳಿದರೆ, ಅದಿನ್ನೂ ಲಯಾವಸ್ಥೆ ಸಾಧಿಸಿಲ್ಲವೆಂದು ತೋರಿಸುತ್ತದೆ. ನಿಜವಾದ ಲಯಾವಸ್ಥೆಯಲ್ಲಿ, ಅಂತಹ ಘೋಷಣೆಯನ್ನು ಮಾಡಲು "ನಾನು" ಉಳಿದಿರುವುದೇ ಇಲ್ಲ ಹಾಗು ತಾನು ಕರಗಿಹೋಗುವುದನ್ನು ನೋಡಲು ಅದರ ಯಾವ ಅಂಶವೂ ಉಳಿದಿರುವುದಿಲ್ಲ. ಬಿಂದುವು, "ನಾನೀಗ ಸಿಂಧುವಾದೆ" ಎಂದು ಹೇಳಲಾಗದು, ಏಕೆಂದರೆ ಹಾಗೆ ಹೇಳುವ "ನಾನು" ಉಳಿದೇ ಇಲ್ಲ. ಇದು ನಾವು ತಿಳಿದಂತೆ ಮೃತ್ಯುವಲ್ಲ; ಇದು ಉನ್ನತೋನ್ನತ ಪರಿವರ್ತನೆ. ಮೃತ್ಯು ಅಮರ ಜೀವನಕ್ಕೆ ಹಾದಿಯೂ ಆಗಬಹುದು.

ಇದನ್ನು ಆಲೋಚಿಸಲು ಕ್ಷಣವೊಂದನ್ನು ತೆಗೆದುಕೊಳ್ಳಿ: "ಸಾಗರ–ತೆಯನ್ನು ಅನುಭವಿಸುವವರು ಯಾರು?" ಎಂದು ಕೇಳಿದ ಹನಿಯು ಈಗ ಇಲ್ಲ. ಅದು, "ಕಾಡ್ಗಿಚ್ಚನ್ನು ಸೇರಿಕೊಂಡ ದೀಪದ

ಜ್ಯೋತಿ ಏನು ಆಲೋಚಿಸುತ್ತದೆ?" ಎಂದು ಕೇಳಿದಂತೆ. ಚಿಂತಕನೀಗ ಜೀವಂತವಾಗಿಲ್ಲವೆಂಬ ಭಾವ ಪ್ರಶ್ನೆಯಲ್ಲಿದೆ.

ಅತಿ ಸಾಧಾರಣ ವಿಷಯಗಳಲ್ಲಿ ಪ್ರಕೃತಿ ಈ ಮಹಾ ರಹಸ್ಯವನ್ನು ನಮಗೆ ತೋರಿಸುತ್ತದೆ. ಜಲಜನಕವನ್ನು ತೆಗೆದುಕೊಳ್ಳಿ: ಅದು ಸ್ಫೋಟಿಸಬಹುದು, ಅಪಾಯಕಾರಿಯಾದ ಅದು ಉರಿಯಲು ಸಿದ್ಧವಾಗಿರುತ್ತದೆ. ಆಮ್ಲಜನಕ ಯಾವಾಗಲೂ ಬೆಂಕಿಯ ಇಂಧನವಾಗಿ, ಅದು ಬೇಗನೆ ಉರಿಯಲು ನೆರವಾಗುತ್ತದೆ. ಪ್ರತ್ಯೇಕವಾಗಿ ಅವೆರಡೂ ತೊಂದರೆಗಳೆ. ಆದರೆ ಅವೆರಡೂ ಸರಿಯಾದ ಪ್ರಮಾಣದಲ್ಲಿ ಒಂದಾದರೆ ಏನಾಗುತ್ತದೆ? ನೀರು! ಎಲ್ಲವೂ ಸುಗಮವಾಗಿ ನಡೆಯುವಂತೆ ಮಾಡುವ ಅದು ಸಕಲ ಜೀವರಾಶಿಯ ಮೂಲ.

ಈಗ ಕೇಳಿ. ಜಲಜನಕ ಏನಾಯಿತು? ಆಮ್ಲಜನಕ ಎಲ್ಲಿದೆ? ಅವು ನಾಶವಾಗಿಲ್ಲ; ಸ್ವತಃ ಅವುಗಳ ಕಲ್ಪನೆಗೂ ನಿಲುಕದಂತೆ ಅವೆರಡೂ ಪರಿವರ್ತನೆಯಾಗಿವೆ. ಜಲಜನಕವು, "ನಾನೀಗ ನೀರಾಗಿದ್ದೇನೆ" ಎಂದು ಹೇಳಲಾಗದು, ಏಕೆಂದರೆ ಅದಕ್ಕೆ ಒತ್ತಾಸೆಯಾಗಿರಲು ಜಲಜನಕದ ಶುದ್ಧರೂಪ ಅಲ್ಲಿಲ್ಲವೇ ಇಲ್ಲ. ಎರಡೂ ಮೂಲಧಾತುಗಳಿಗಿಂತ ಬೇರೆಯದೆ ಆದ, ಭಿನ್ನ ಉದ್ದೇಶವನ್ನು ಪೂರೈಸುವ ಹೊಸ ವಾಸ್ತವವೊಂದು ಹುಟ್ಟಿಕೊಂಡಿದೆ.

ಹಾಗೆಯೆ ಕ್ಲೋರಿನ್ ಮತ್ತು ಸೋಡಿಯಂ ಸೇರಿ ಮಾಡುವ ಅದ್ಭುತವನ್ನು ನೋಡಿ! ವಿಷಯುಕ್ತ ಅನಿಲವಾದ ಕ್ಲೋರಿನ್ ಅನ್ನು ಯುದ್ಧದಲ್ಲಿ ಬಳಸಲಾಗುತ್ತದೆ; ನೀರಿನ ಸಂಪರ್ಕಕ್ಕೆ ಬಂದೊಡನೆ ಸೋಡಿಯಂ ಸ್ಫೋಟಗೊಳ್ಳುತ್ತದೆ. ಆದರೆ ಅವೆರಡೂ ಬೆರೆತಾಗ, ನಮ್ಮ ಜೀವಕೋಶಗಳಿಗೆ ಅತ್ಯಗತ್ಯವಾದ ಉಪ್ಪು ಸೃಷ್ಟಿಯಾಗುತ್ತದೆ. ಮಾರಣಾಂತಕವಾದುದು ಆವಶ್ಯಕತೆಯಾಗುತ್ತದೆ ಹಾಗು ವಿಷಕಾರಿಯಾದುದು ಸುರಕ್ಷಿತವಾಗುತ್ತದೆ.

ಸಾಗರವನ್ನು ಸೇರುವ ನದಿ, ಸಾಗರದಲ್ಲಿ ಬಿದ್ದು ಒಂದಾಗುವ ಮಳೆಹನಿಗಳು ಮತ್ತು ಆಮ್ಲಜನಕವನ್ನು ಸೇರುವ ಜಲಜನಕ–ಇವೆಲ್ಲವೂ ಒಂದುಗೂಡುವುದೇ ಮಹದೋದ್ದೇಶವೆಂದು ಹೇಳುವ ಭಿನ್ನ ರೀತಿಗಳು. ಲಯವೆಂದರೆ ಎರಡು ಅಂಶಗಳು ಒಂದಾಗುವುದಷ್ಟೇ ಅಲ್ಲ, ಅದರಿಂದ ಹೊಸತಾದ, ಅರ್ಥಪೂರ್ಣವಾದುದೇನೋ ಸೃಷ್ಟಿಯಾಗುವುದು. ಹಳೆಯ ಅಸ್ಮಿತೆಯನ್ನು ಬಿಟ್ಟುಕೊಟ್ಟು, ಮಹತ್ತರ ಉದ್ದೇಶವೊಂದಕ್ಕೆ ಸಮಸ್ತರಿಗೂ ನೆರವಾಗುವಂಥದ್ದು.

**ಮಹದೋದ್ದೇಶಕ್ಕಾಗಿ ತನ್ನನ್ನೇ ಕಳೆದುಕೊಳ್ಳುವುದು:** ಇಲ್ಲಿ ವಿಷಯ, ಒಂದಕ್ಕಿಂತ ಮತ್ತೊಂದು ಮುಖ್ಯ ಎಂಬುದಲ್ಲ. ಇದು ಹೊಸತಾದ, ಮಹೋನ್ನತ ಉದ್ದೇಶಕ್ಕಾಗಿ ಎರಡೂ ಅಂಶಗಳು ತನ್ನತನವನ್ನು ಕಳೆದುಕೊಳ್ಳುವುದರ ಬಗೆ. ಸಾರ್ಥಕತೆಯನ್ನು ಕಂಡುಕೊಳ್ಳಲು  ಏನನ್ನಾದರೂ ಬಿಟ್ಟುಕೊಡುವಂತೆ, ಅಂದುಕೊಳ್ಳಿರಿ.

**ಸ್ಥಿತಿಯ ಬದಲಾವಣೆ, ಕೇವಲ ಕೂಟವಲ್ಲ:** ಸಾಮಾನ್ಯ ಲಯಾವಸ್ಥೆಯು, ಎರಡು ವಿಭಿನ್ನ ಬಣ್ಣಗಳನ್ನು ಸೇರಿಸಿ ಒಂದು ಹೊಸ ಬಣ್ಣವನ್ನು ಮಾಡಿದಂತೆ. ಅದೇ ಅತೀಂದ್ರಿಯ ಲಯಾವಸ್ಥೆಯು, ಎರಡು ಅಂಶಗಳು ಒಗ್ಗೂಡಿ ಹೊಸತೊಂದು ಅಂಶವನ್ನು ಸೃಷ್ಟಿಸಿದಂತೆ, ಅಂದರೆ ಜಲಜನಕ–ಆಮ್ಲಜನಕಗಳು ಸೇರಿ ನೀರನ್ನು ಸೃಷ್ಟಿಸಿದಂತೆ. ಅವು ಕೇವಲ "ಬೆರೆ"ಯುವುದಿಲ್ಲ; ಅವು ಬದಲಾಗುತ್ತವೆ.

**ಅನಿರೀಕ್ಷಿತ ಫಲಿತಾಂಶ:** ಮೂಲಾಂಶಗಳು ತಾವೇ ಪ್ರತ್ಯೇಕವಾಗಿ ಮಾಡಲಾರದ್ದನ್ನು ಅತೀತವಾದ ಅಂಶ ಮಾಡುತ್ತದೆ. ಹೊಸ ಅಂಶಕ್ಕೆ, ಲಯಕ್ಕೂ ಮೊದಲು ಇರದ ಹೊಸ ಸಾಮರ್ಥ್ಯ, ಹೊಸ ಮನಸ್ಸು ಅಥವಾ ಹೊಸ ಗುರಿ ಇರುತ್ತದೆ.

ಲಯವು ಕೇವಲ ಆರಂಭವಷ್ಟೆ ಎಂದು ಬಾಬೂಜಿಯವರು ಹೇಳಿದಾಗ, ಬಹಳಷ್ಟು ಜನರಿಗೆ ಆಘಾತವಾಯಿತು. ಅವರು, "ಗುರುಗಳೆ, ಐಕ್ಯವಾಗುವುದು ಕೊನೆಯಲ್ಲದಿದ್ದರೆ ಅದರ ನಂತರ ಬರುವುದೇನು? ಎಂದು ಕೇಳಿದರು.

ನಾನು ಅನುಭವದಿಂದ ಕಲಿತಿರುವುದೇನೆಂದರೆ:

ಮೊದಲಿಗೆ ಲಯಾವಸ್ಥೆ ಬರುವುದು, ಅದು ಸಾಗರವು ತೆರೆದ ಬಾಹುಗಳಿಂದ ನದಿಯನ್ನು ಸ್ವಾಗತಿಸಿದಂತೆ. ಕ್ಷೀಣವಾಗಿದ್ದರೂ ಅದರಲ್ಲಿ ನದಿಯ ನೆನಪು ಉಳಿದಿರುತ್ತದೆ. ನದಿಯ ಈ ಚಲನೆಯು, ಅದೇ ಲೋಕಕ್ಕೆ ಪ್ರವೇಶ ಎಂದು ತಿಳಿಯಿರಿ; ಅಂದರೆ ಸಾಲೋಕ್ಯತೆ.

ನಂತರ ನಾವು ಪಕ್ವಗೊಂಡಂತೆ, ನಾವು ಒಂದೇ ತೆರನಾಗುತ್ತೇವೆ ಹಾಗು ವಿಭಿನ್ನತೆಯ ನೆನಪೂ ಸಹ ಹೊರಟುಹೋಗುತ್ತದೆ. ಸೋಡಿಯಂಗೆ ತಾನು ಸೋಡಿಯಂ ಆಗಿದ್ದೆನೆಂಬ ನೆನಪೂ

> ಸಾಮಾನ್ಯ ಲಯಾವಸ್ಥೆಯು, ಎರಡು ವಿಭಿನ್ನ ಬಣ್ಣಗಳನ್ನು ಸೇರಿಸಿ ಒಂದು ಹೊಸ ಬಣ್ಣವನ್ನು ಮಾಡಿದಂತೆ. ಅದೇ ಅತೀಂದ್ರಿಯ ಲಯಾವಸ್ಥೆಯು, ಎರಡು ಅಂಶಗಳು ಒಗ್ಗೂಡಿ ಹೊಸತೊಂದು ಅಂಶವನ್ನು ಸೃಷ್ಟಿಸಿದಂತೆ, ಅಂದರೆ ಜಲಜನಕ-ಆಮ್ಲಜನಕಗಳು ಸೇರಿ ನೀರನ್ನು ಸೃಷ್ಟಿಸಿದಂತೆ. ಅವು ಕೇವಲ ''ಬೆರೆ''ಯುವುದಿಲ್ಲ; ಅವು ಬದಲಾಗುತ್ತವೆ.

ಉಳಿದಿರುವುದಿಲ್ಲ. ಅದೀಗ ಉಪ್ಪು ಮಾತ್ರ, ಅದಕ್ಕೆ ತಾನು ಪುನಃ ವಿಸ್ಫೋಟಕಾರಿಯಾಗುವುದು ಬೇಕಿಲ್ಲ.

ಇದು ಅನುರೂಪತೆಗೆ ಸಾಲದು. ಈ ಘಟ್ಟದಲ್ಲಿ, ನಮ್ಮ ವೈಯಕ್ತಿಕ 'ಇಚ್ಛಾಶಕ್ತಿ ಹೊರಟುಹೋಗುತ್ತದೆ ಹಾಗು ಹೊಂದಾಣಿಕೆ ಅದೆಷ್ಟು ಪರಿಪೂರ್ಣವಾಗಿರುತ್ತದೆ ಎಂದರೆ ದೈವೇಚ್ಛೆ ಯಾವುದೇ ಪ್ರತಿರೋಧವಿಲ್ಲದೆ ಅಥವಾ ಹರಿವಿನ ಅರಿವೂ ಇಲ್ಲದೆ ಪಾತ್ರೆಯೊಳಕ್ಕೆ ಪ್ರವಹಿಸುತ್ತದೆ. ಅದು ಏನನ್ನೂ ದೂರ ತಳ್ಳುವುದಿಲ್ಲ; ಆಕಾಶದಂತೆ ಅದು ಎಲ್ಲವನ್ನೂ ಹಿಡಿದಿಟ್ಟುಕೊಳ್ಳುತ್ತದೆ.

ಇದಕ್ಕಿಂತ ಹೆಚ್ಚಾಗಿ... ಪದಗಳು ನ್ಯಾಯ ಒದಗಿಸುವುದಿಲ್ಲ. ಜೀವಿಗಳಿಗೆ ಪೋಷಣೆ ಒದಗಿಸುವುದರ ಸಾರ್ಥಕ್ಯವನ್ನು ಜಲಜನಕ ಮತ್ತು ಆಮ್ಲಜನಕಗಳಿಗೆ ನೀರು ಹೇಗೆ ತಾನೆ ಹೇಳಬಲ್ಲುದು? ಆಹಾರವನ್ನು ತಾಜಾ ಇರಿಸುವುದು ಮತ್ತು ರಕ್ತದ ಸಮತೋಲನವನ್ನು ನಾಜೂಕಾಗಿ ಕಾಪಾಡುವುದರಿಂದ ತನಗೆಷ್ಟು ಸಂತೋಷವಾಗುವುದೆಂದು ಸೋಡಿಯಂ ಮತ್ತು ಕ್ಲೋರಿನ್‌ಗಳಿಗೆ ಉಪ್ಪು ಹೇಗೆ ತಾನೆ ವಿವರಿಸಬಲ್ಲುದು?

ಪಾಶ್ಚಿಮಾತ್ಯ ತತ್ತ್ವಶಾಸ್ತ್ರವು "ಶೂನ್ಯ" ವನ್ನು ಭಯಂಕರವಾದ ಖಾಲಿತನ ಎನ್ನುತ್ತದೆ, ಆದರೆ ನಮಗೆ ಅದು ಅತಿ ಸಕ್ರಿಯ ಪೂರ್ಣತೆ ಎಂದು ತಿಳಿದಿದೆ. ಜಲಜನಕ ಮತ್ತು ಆಮ್ಲಜನಕಗಳು ಒಂದಾಗಿ ನೀರನ್ನು ಸೃಷ್ಟಿಸಿದಾಗ, ಅವು "ಶೂನ್ಯ"ವಾಗುತ್ತವೆಯೆ? ಇಲ್ಲ! ಅವು ಇಡೀ ಜೀವಸಂಕುಲಕ್ಕೆ ನೆರವಾಗುತ್ತವೆ. ಲಯದ ನಂತರ ಅಹಂಕಾರ ಶೂನ್ಯವಾದಾಗ ಹೀಗೇ ಆಗುತ್ತದೆ: ಅದು ಖಾಲಿಯಲ್ಲ; ಅದೆಷ್ಟು ತುಂಬಿರುತ್ತದೆ ಎಂದರೆ ಅದನ್ನು ಘೋಷಿಸುವ ಅಗತ್ಯವಿಲ್ಲ.
ಲಯವನ್ನು ಅಧಿಗಮಿಸಿದ್ದು, ಸಾಕ್ಷಾತ್ಕಾರ ಪಡೆದವರು, "ನನಗೆ ಜ್ಞಾನೋದಯವಾಗಿದೆ!" ಎಂದು ಹೇಳಿಕೊಂಡು ತಿರುಗಾಡುವುದಿಲ್ಲ. ನೀರು, "ನಾನು H2O !" ಎಂದು ಹೇಳುವ ಅಗತ್ಯವಿಲ್ಲ.

ಅದು ಹರಿಯುತ್ತದೆ, ಪೋಷಿಸುತ್ತದೆ, ಸ್ವಚ್ಛಗೊಳಿಸುತ್ತದೆ ಹಾಗು ಆಸರೆ ನೀಡುತ್ತದೆ; ಅದರ ಅಸ್ತಿತ್ವವೇ ಅದರ ಘೋಷಣೆ.

ಈಗ, ಚಿಂತನೆ ಮಾಡುವ ವಿಚಾರವೊಂದಿದೆ: ಸಾಗರವಾಗುವುದು ಗುರಿಯಲ್ಲ. ನಾವು ಎಂದಿಗೂ ಬಿಂದುವಾಗಿರಲಿಲ್ಲವೆಂದು ಅರಿತುಕೊಳ್ಳುವುದೇ ಉದ್ದೇಶ. ನೀವು ಎಂದಿನಿಂದಲೂ ನಾನೊಂದು ಬಿಂದುವೆಂದು ತಿಳಿದ ಸಾಗರವಾಗಿದ್ದಿರಿ. ಆದರೆ ಈ ಜ್ಞಾನವೆ ಕೊನೆಯಲ್ಲ; ಇದು ನಿಜವಾದ ಕಾರ್ಯದ ಆರಂಭವಷ್ಟೆ.

ನೀವು ಸಾಗರವೆಂದು ಅರಿತುಕೊಂಡ ನಂತರ, ಮರಳಿ ಪ್ರಜ್ಞಾಪೂರ್ವಕವಾಗಿ ನಿಮ್ಮನ್ನು ನೀವು ಹನಿಯೆಂದು ಹೇಗೆ ಭಾವಿಸಬೇಕೆಂದು ಕಲಿಯಬೇಕು. ಈ ಬಾರಿ, ಇದನ್ನು ನೀವು ಅಜ್ಞಾನದಿಂದ ಮಾಡದೆ, ಪರಮೋಚ್ಚ ಜ್ಞಾನದಿಂದ ಮಾಡುತ್ತೀರಿ. ಇದೇ ಮುಕ್ತಾತ್ಮವನ್ನು ಬಂಧಾತ್ಮಕ್ಕಿಂತ ವಿಭಿನ್ನವಾಗಿ ಮಾಡುವುದು: ಒಬ್ಬ ವ್ಯಕ್ತಿ ತಾನು ನೋಡಿದ್ದನ್ನು ನಂಬಿದರೆ, ಇನ್ನೊಬ್ಬರು ಇತರರು ಕನಸುಗಾಣಲೆಂದು ಉದ್ದೇಶಪೂರ್ವಕವಾಗಿ ತನ್ನ ಪಾತ್ರ ನಿಭಾಯಿಸುವರು. "ನಾನು ಮಾತನಾಡಿದಾಗ, ಅದು ಯಾರೆಂದು ಚಕಿತನಾಗುತ್ತೇನೆ: ಲಾಲಾಜಿಯವರೆ? ನಾನೆ? ಅಥವಾ

> ಲಯವನ್ನು ಅಧಿಗಮಿಸಿದ್ದು, ಸಾಕ್ಷಾತ್ಕಾರ ಪಡೆದವರು, ''ನನಗೆ ಜ್ಞಾನೋದಯವಾಗಿದೆ!'' ಎಂದು ಹೇಳಿಕೊಂಡು ತಿರುಗಾಡುವುದಿಲ್ಲ. ನೀರು, ''ನಾನು H2O !'' ಎಂದು ಹೇಳುವ ಅಗತ್ಯವಿಲ್ಲ. ಅದು ಹರಿಯುತ್ತದೆ, ಪೋಷಿಸುತ್ತದೆ, ಸ್ವಚ್ಛಗೊಳಿಸುತ್ತದೆ ಹಾಗು ಆಸರೆ ನೀಡುತ್ತದೆ; ಅದರ ಅಸ್ತಿತ್ವವೇ ಅದರ ಘೋಷಣೆ.

ಬೇರೊಬ್ಬರೆ?" ಎಂದು ಬಾಬೂಜಿ ನುಡಿಯುತ್ತಾರೆ. ಇದೆಲ್ಲದರಿಂದ ಒಂದಂತೂ ಖಚಿತ, ನಮ್ಮ "ನಾನು" ಎಂಬುದು ಹೊರಟುಹೋಗುತ್ತದೆ.

"ಇವೇನೊ ಶ್ರೇಷ್ಠ ವಿಚಾರಗಳೆ, ಆದರೆ ನಾನಿನ್ನೂ ಪ್ರತಿ ಮುಂಜಾನೆ ಸಂಚಾರ ದಟ್ಟಣೆ ಹಾಗು ಇತರ ಸಮಸ್ಯೆಗಳನ್ನು ನಿಭಾಯಿಸಬೇಕಾಗುತ್ತದೆ" ಎಂದು ನೀವು ಅಂದುಕೊಳ್ಳುತ್ತಿರಬಹುದು.

ಅದೇ ಮುಖ್ಯ ವಿಷಯ. ಅನಂತದೊಂದಿಗೆ ಸಂಪರ್ಕದಲ್ಲಿರುವುದೊಂದಿಗೆ, ತನ್ನ ಜನ್ಮದ ಇತಿಮಿತಿಗಳ ಬಗ್ಗೆ ಸಂಪೂರ್ಣ ಅರಿವನ್ನಿಟ್ಟುಕೊಂಡು, ಪ್ರತಿಯೊಂದು ಹನಿಯಂತೆ ತನ್ನನ್ನು ತಾನು ಹೇಗೆ ಭಾವಿಸಬೇಕೆಂದು ಸಾಗರ ಕಲಿಯಬೇಕಾಗಿದೆ.

"ಆದರೆ ದಾಜಿ, ನಾವಿದನ್ನು ನಿಜ ಜೀವನದಲ್ಲಿ ಹೇಗೆ ಮಾಡುವುದು?" ಎಂದು ನೀವು ಕೇಳಬಹುದು.

ನೀರಿನಂತಿರಿ. ನೀರು ಯಾರಿಗೆ ಸಹಾಯ ಮಾಡಬೇಕೆಂದು ಆಯ್ಕೆ ಮಾಡುವುದಿಲ್ಲ. ಅದು, "ನಾನು ಸುವರ್ಣ ಕಾಲುವೆಗಳಲ್ಲಿ ಮಾತ್ರ ಹರಿಯುತ್ತೇನೆ" ಎಂದು ಹೇಳದು. ಅದು ಒಂದೇ ರೀತಿಯಾಗಿದ್ದುಕೊಂಡು, ಪ್ರತಿಯೊಂದು ಧಾರಕಕ್ಕೆ ಸರಿಹೊಂದುವಂತೆ ಬದಲಾಗುತ್ತದೆ. ಬಿಸಿ ಮಾಡಿದಾಗ ಯಾವುದೇ ಸಮಸ್ಯೆಯಿಲ್ಲದೆ ಆವಿಯಾಗುತ್ತದೆ. ತಂಪಾದಾಗ ಸುಲಭವಾಗಿ ಘನೀಭವಿಸುತ್ತದೆ. ಆದರೆ, ಇವೆಲ್ಲ ಬದಲಾವಣೆಗಳ ನಂತರವೂ, ತಾನು ನಿಜವಾಗಲೂ ಏನೆಂದು ಅದೆಂದಿಗೂ ಮರೆಯುವುದಿಲ್ಲ; ಇದು ಜೀವನ ನಡೆಸುವ ಮಾರ್ಗಗಳಲ್ಲೊಂದು.

**ಸಾಗರವಾಗುವುದು ಗುರಿಯಲ್ಲ. ನಾವು ಎಂದಿಗೂ ಬಿಂದುವಾಗಿರಲಿಲ್ಲವೆಂದು ಅರಿತುಕೊಳ್ಳುವುದೇ ಉದ್ದೇಶ. ನೀವು ಎಂದಿನಿಂದಲೂ ನಾನೊಂದು ಬಿಂದುವೆಂದು ತಿಳಿದ ಸಾಗರವಾಗಿದ್ದಿರಿ. ಆದರೆ ಈ ಜ್ಞಾನವೆ ಕೊನೆಯಲ್ಲ; ಇದು ನಿಜವಾದ ಕಾರ್ಯದ ಆರಂಭವಷ್ಟೆ**

ಸೋಡಿಯಂ ನಿಮಗೇನು ಕಲಿಸಿತೆಂದು ನೆನಪಿಡಿ: ಜೀವಾಧಾರವಾದ ನೀರು ಸಹ, ತಪ್ಪು ವಸ್ತುವಿನೊಂದಿಗೆ ಸಂಪರ್ಕಕ್ಕೆ ಬಂದರೆ ಮಾರಕವಾಗಬಹುದು. ಆಧ್ಯಾತ್ಮಿಕ ಪಯಣಕ್ಕೆ, ನೀರಿನ ನಮ್ಯತೆ ಹಾಗು ನಾವು ಬದಲಾಗಲು ನೆರವಾಗುವ ಸರಿಯಾದ ವ್ಯಕ್ತಿಯನ್ನು ಆರಿಸುವ ಜ್ಞಾನಗಳೆರಡೂ ಆವಶ್ಯಕ. ಇದೇ ತತ್ತ್ವವು ವಿವಾಹದ ವಿಷಯದಲ್ಲೂ ಅನ್ವಯಿಸುತ್ತದೆ. ಸೋಡಿಯಂ, ಕ್ಲೋರಿನ್‌ನೊಡನೆ ಒಂದಾಗುವ ಬದಲು ನೀರಿನ ಸಂಪರ್ಕಕ್ಕೆ ಬಂದರೆ! ಢಂ...

ಲಯದ ನಂತರ ಏನಾಗುತ್ತದೆ? ನೀರಿನ ನಂತರ ಇರುವ, ನೀರು ಏನೇನು ಆಗಬಹುದೊ, ಏನೇನು ಮಾಡಬಹುದೊ ಅವೆಲ್ಲ. ನಮ್ಮನ್ನು ಅವಾಕ್ಕಾಗಿಸುವ, ಅತಿ ಸುಂದರವಾದ ಮಂಜುಗಡ್ಡೆಯ ಶಿಲ್ಪಗಳು, ಆವಿಯಿಂದ ಓಡುವ ಬೃಹತ್ ಇಂಜಿನ್‌ಗಳು, ಬಂಜರು ಭೂಮಿಗೆ ಮಳೆ ಹನಿಸುವ ಮೋಡಗಳು, ಬೃಹದಾಕಾರದ ಕಣಿವೆಗಳನ್ನೇ ಕೊರೆಯುವ ನದಿಗಳು, ಮತ್ತು ಇಡೀ ಸೂರ್ಯನನ್ನೇ ಪ್ರತಿಫಲಿಸುವ ಇಬ್ಬನಿ ಹನಿಗಳು.

ಲಯದ ನಂತರದ ಆಕಾಶದಲ್ಲಿ ಅನೇಕ ಘಟನೆಗಳು ಸಂಭವಿಸಬಹುದು. ಒಂದಾಗುವ ಮುನ್ನ ಅವು ಜಲಜನಕ ಮತ್ತು ಆಮ್ಲಜನಕ; ಆನಂತರ ಅವೆರಡೂ ಸೇರಿ ತಯಾರಿಸುವ, ಎಂದಿನಿಂದಲೂ ಇರುವ, ಮುಂದೆಯೂ ಇರುವ ಸಕಲ ಜಲಸಂಪತ್ತು. ಸ್ವರಮೇಳ ಆರಂಭವಾಗಲಿದೆ, ಸಾಧ್ಯವಿರುವ ಸಕಲ ಮಾಧುರ್ಯವೂ ಅದರಲ್ಲಿವೆ.

ನೀರಿನಂತಿರಿ. ನೀರು ಯಾರಿಗೆ ಸಹಾಯ ಮಾಡಬೇಕೆಂದು ಆಯ್ಕೆ ಮಾಡುವುದಿಲ್ಲ. ಅದು, ''ನಾನು ಸುವರ್ಣ ಕಾಲುವೆಗಳಲ್ಲಿ ಮಾತ್ರ ಹರಿಯುತ್ತೇನೆ'' ಎಂದು ಹೇಳದು. ಅದು ಒಂದೇ ರೀತಿಯಾಗಿದ್ದುಕೊಂಡು, ಪ್ರತಿಯೊಂದು ಧಾರಕಕ್ಕೆ ಸರಿಹೊಂದುವಂತೆ ಬದಲಾಗುತ್ತದೆ.

ಆಧ್ಯಾತ್ಮಿಕ ಪಯಣಕ್ಕೆ, ನೀರಿನ ನಮ್ಯತೆ ಹಾಗು ನಾವು ಬದಲಾಗಲು ನೆರವಾಗುವ ಸರಿಯಾದ ವ್ಯಕ್ತಿಯನ್ನು ಆರಿಸುವ ಜ್ಞಾನಗಳೆರಡೂ ಆವಶ್ಯಕ.

ಎರಡು ಮಹಾ "ಶೂನ್ಯ"ಗಳು ಒಂದಾದಾಗ ಏನಾಗುತ್ತದೆ? ತಾರ್ಕಿಕ ಉತ್ತರವೆಂದರೆ, ಅಲ್ಲಿ ಉಳಿಯುವುದು ಖಾಲಿತನ. ಆದರೆ ಖಾಲಿತನವೆಂದರೆ ಶೂನ್ಯ (zero) ಅಲ್ಲ. ಅನಂತತೆ

(ಇನ್ಫಿನಿಟಿ) ಎಂಬ ಗಣಿತದ ಪರಿಕಲ್ಪನೆಯಲ್ಲಿ ಹೇಳುವಂತೆ, ಅನಂತ ಮತ್ತು ಅನಂತದ ಮೊತ್ತ ಅನಂತ ಆಗುವುದೇ ಹೊರತು "ಎರಡು ಅನಂತ" ಆಗುವುದಿಲ್ಲ.

ವಿಭಿನ್ನ ಪ್ರಮಾಣದ ಅನಂತತೆಗಳಿವೆ ಎಂದು ಗಣಿತಜ್ಞರು ಕಂಡುಕೊಂಡಾಗ, ಅವರಿಗೆ ಗಹನವಾದ ಆಧ್ಯಾತ್ಮಿಕ ಸತ್ಯದ ಅರಿವಾಯಿತು. ಲಯದ ನಂತರ ಅನಂತ ವಿಷಯಗಳಿರುವುದಷ್ಟೇ ಅಲ್ಲದೆ, ಅನಂತ ಅನಂತಗಳಿವೆ. ಅವು ಪ್ರತಿಯೊಂದೂ ವಿಭಿನ್ನವಾಗಿದ್ದು, ಉಳಿದೆಲ್ಲವುಗಳನ್ನು ಒಳಗೊಂಡಿರುತ್ತವೆ. ಆದ್ದರಿಂದಲೇ ಲಯದ ನಂತರದ ಪಯಣವೆಂದಿಗೂ ಮುಗಿಯದು.

ನಾನು ನಿಮಗೆ ಹೇಳಬೇಕಾಗಿರುವುದು ಏನೆಂದರೆ: ಹನಿಯು ಸಾಗರವಾಗುವುದಿಲ್ಲ; ಬಿಂದುವಿಗೆ ತಾನು ಎಂದಿನಿಂದಲೂ ಸಿಂಧುವೇ ಆಗಿದ್ದೆನೆಂಬ ಅರಿವಾಗುತ್ತದೆ. ಆದರೆ ಇದು ಅನಂತ ವಿಶ್ವವಿದ್ಯಾಲಯದ ಶಾಲೆಯಲ್ಲಿ ಮೊದಲ ದಿನದ ಶೋಧನೆಯಷ್ಟೆ. ಅದರ ನಂತರ ಏನಿದೆ?

ಅತೀತವನ್ನು ಅಧಿಗಮಿಸಿದವರು ಅದನ್ನು ಹೇಳಬಲ್ಲರು. ಅವರು ಮರಳಿ ಬಂದಾಗ, ಮೌನವು ಶಬ್ದಗಳಿಗಿಂತ ಗಟ್ಟಿಯಾಗಿ ಮಾತನಾಡಬಲ್ಲುದು, ಆ ಸ್ತರದ ಬೋಧನೆ ಹೆಚ್ಚು ಕಲಿಸಬಲ್ಲುದು ಹಾಗು ಯಾವ ಶಕ್ತಿಯೂ ಇಲ್ಲದಿರುವುದೇ ಅತಿ ಶ್ರೇಷ್ಠ ಶಕ್ತಿ; ಜಲಜನಕ–ಆಮ್ಲಜನಕಗಳು ಒಂದರಲ್ಲೊಂದು ಕರಗಿ ಸಚೇತನಗೊಂಡು ಜೀವವೇ ಆಗಿ, ಜೀವನವ ಪ್ರವೇಶಿಸುವ ಚಿರಂತನ ಲೀಲೆ ನಡೆಸುವಂತಿರುವ ಪ್ರೇಮ ಮಾತ್ರವೆ ಅತಿ ಶ್ರೇಷ್ಠವಾದುದು ಎಂದವರು ಅರಿತಿರುತ್ತಾರೆ.

ವಿಷಯಗಳನ್ನು ಬಿಡಿಸಿ ನೋಡುವುದರಲ್ಲಿನ  ಮೋಡಿ ಇದು. ಪಥದಾಚೆಗೆ ಹೋಗುವ ಪಥವಿದು. ಆದ್ದರಿಂದಲೆ ನೀವು, "ಲಯದ ನಂತರ ಏನಾಗುತ್ತದೆ?" ಎಂದು ಕೇಳಿದರೆ ನನ್ನ ಉತ್ತರ ಒಂದು ಮಂದಹಾಸವಷ್ಟೆ. ಏನನ್ನೂ ಹೇಳುವ ಅಗತ್ಯವಿಲ್ಲ; ನೀವೇ ಅದರ ಉತ್ತರವಾಗಬೇಕು.

ಹಾಗಾದಾಗ, ಏಕೆ ಗುರುಗಳು ಏನೂ ಹೇಳುವುದಿಲ್ಲವೆಂದು ನಿಮಗೆ ಅರ್ಥವಾಗುತ್ತದೆ. ಅವರು ಸುಮ್ಮನೆ ನಿಮಗೆ ನೀರಿನ ಲೋಟವೊಂದನ್ನು ಕೊಟ್ಟು, ಅದು ಎಷ್ಟು ಶ್ರೇಷ್ಠವೆಂದು ನೀವು ಅರಿತುಕೊಳ್ಳಲು ಕಾಯುತ್ತಾರೆ. ನೀವು ಆ ನೀರಿನ ಲೋಟವನ್ನು ಹಿಡಿದುಕೊಂಡಾಗ, ಜಲಜನಕ–ಆಮ್ಲಜನಕಗಳು ಹೇಗೆ ಮತ್ತೊಂದು ರೂಪವಾಗಿ ತಾಳಿವೆಯೆಂದು ಆಲೋಚಿಸಿ

ನೋಡಿ. ನೀವೇ ಸಾಗರ, ಅದೆಷ್ಟು ಪರಿಶುದ್ಧವಾಗಿದೆಯೆಂದರಿತು ಬೆರಗಾಗುತ್ತೀರಿ. ನಿಧಾನವಾಗಿ ತನ್ನದೇ ಲೀಲೆಯಲ್ಲಿ ಸಚೇತಗೊಳ್ಳುತ್ತಿರುವ ದೈವವೂ ನೀವೇ.

ಲಯದ ನಂತರ ಅನಂತ ವಿಷಯಗಳಿರುವುದಷ್ಟೇ ಅಲ್ಲದೆ, ಅನಂತ ಅನಂತಗಳಿವೆ. ಅವು ಪ್ರತಿಯೊಂದೂ ವಿಭಿನ್ನವಾಗಿದ್ದು, ಉಳಿದೆಲ್ಲವುಗಳನ್ನು ಒಳಗೊಂಡಿರುತ್ತವೆ. ಆದ್ದರಿಂದಲೇ ಲಯದ ನಂತರದ ಪಯಣವೆಂದಿಗೂ ಮುಗಿಯದು.

ಆ ಸ್ಮರಣೆಯಲ್ಲಿ ಅತ್ಯದ್ಭುತ ವಿಷಯವೊಂದು ಸಂಭವಿಸುತ್ತದೆ: ಸಾಧಾರಣವಾದುದು ಪವಿತ್ರವಾಗುತ್ತದೆ; ಬೇರೇನೋ ಆಗಿ ಬದಲಾಗುವುದರಿಂದ ಅಲ್ಲ, ತಾನು ಎಂದಿನಿಂದಲೂ ಏನಾಗಿದ್ದನೊ ಅದು ಪ್ರಕಟಗೊಳ್ಳುವುದರಿಂದ.
ಎಲ್ಲ ಲಯಗಳಿಗೂ ಅತೀತವಾದ ಪರಮ ಮೌನದಲ್ಲಿ, ಸರಿಯಾದ ಮಾರ್ಗವನ್ನು ಆಯ್ಕೆ ಮಾಡುವ ವಿವೇಚನೆಯನ್ನು ಆತ ದಯಪಾಲಿಸಲಿ.

ಮಹಾನ್ ಗುರುಗಳಲ್ಲಿ ಪ್ರಾರ್ಥನೆಯೊಂದಿಗೆ,
ಕಮಲೇಶ್



# Notes

